ಇ) ಈ ಆರೋಗ್ಯ ಕೇಂದ್ರಗಳಿಗೆ ಆಯುರ್ವೇದ ವೈದ್ಯರುಗಳ ನೇಮಕ ಮಾಡುವ ವಿಚಾರ ಸರ್ಕಾರಕ್ಕೆ ಇರುವುದಿಲ್ಲ.

ಈ) ಭಾರತ ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆಯು ಜನರ ಆರೋಗ್ಯ ಸುಧಾರಿಸಲು ಶಿಶು ಮರಣ, ಜನನ ಪ್ರಮಾಣ ಮಕ್ಕಳ ಮರಣ ಪ್ರಮಾಣ ಮತ್ತು ತಾಯಂದಿರ ಮರಣಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಮತ್ತು ಗ್ರಾಮೀಣ ಸಮುದಾಯವನ್ನು ಉತ್ತೇಜಿಸುವ ಉದ್ದೇಶದಿಂದ ಸಮುದಾಯ ಪ್ರಶಸ್ತಿಯನ್ನು ಪ್ರಾರಂಭಿಸಿದೆ. ಗರ್ಭಧಾರಕ ಶಕ್ತಿ ಮತ್ತು ಮರಣ ಪ್ರಮಾಣಗಳನ್ನು ಕಡಿಮೆಗೊಳಿಸುವಲ್ಲಿ ಯಾವ ಗ್ರಾಮ ಹೆಚ್ಚಿನ ಸಾಧನೆಯನ್ನು ಮಾಡುತ್ತದೆಯೋ, ಆ ಗ್ರಾಮಕ್ಕೆ ರೂ. 2.00 ಲಕ್ಷ ನಗದು ಪ್ರಶಸ್ತಿಯನ್ನು ನೀಡಲಾಗುತ್ತಿದೆ. 500 ಅಥವಾ ಹೆಚ್ಚಿನ ಜನಸಂಖ್ಯೆಯುಳ್ಳ ಗ್ರಾಮಕ್ಕೆ ನಗದು ಪ್ರಶಸ್ತಿಯನ್ನು ನೀಡಲಾಗುತ್ತದೆ.

ಉ) ಬಂದಿರುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಸರ್ಕಾರಿ ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಸೇವಾ ಸೌಲಭ್ಯಗಳಲ್ಲಿ ಇರುವ ವ್ಯತ್ಯಾಸ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1000 (1814)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ, ಶಿಕ್ಷಕೇತರ ನೌಕರರಿಗೆ ಇದ್ದ ಕೆಲಸದ ಹೊರೆ ಹಾಗೂ ಕೆಲಸದ ಸಮಯ ಒಂದೇ ಇದ್ದರೂ ಕೂಡಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ದುಡಿಯುವ ನೌಕರರ ಹಾಗೂ ಸಹಾಯಧನ ಪಡೆಯುವ ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಮತ್ತು ಶಿಕ್ಷಕೇತರ ನೌಕರರ ಸೇವಾ ಸೌಲಭ್ಯಗಳಲ್ಲಿ ವ್ಯತ್ಯಾಸಗಳು ಇರುವುದು ನಿಜವೇ;

ಹಾಗಿದ್ದಲ್ಲಿ ಅವುಗಳ ನಿವಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ಸರ್ಕಾರಿ ನೌಕರರಿಗೆ ಇರುವ ಕೆಲವು ಸೌಲಭ್ಯಗಳಲ್ಲಿ ಖಾಸಗಿ ಶಾಲೆಗಳ ಸಿಬ್ಬಂದಿಯವರಿಗೆ ವ್ಯತ್ಯಾಸವಿರುವುದು ನಿಜ. ಖಾಸಗಿ ಪ್ರೌಢಶಾಲೆಗಳ ಆಡಳಿತ ಮತ್ತು ನಿರ್ವಹಣೆ ಸಂಬಂಧಿಸಿದ ಆಡಳಿತ ಮಂಡಳಿಗಳ ಹೊಣೆಯಾಗಿದ್ದು ತಮ್ಮ ಸಿಬ್ಬಂದಿಗೆ ನೀಡಬೇಕಾದ ಸೌಲಭ್ಯಗಳನ್ನು ನೀಡುವ ಜವಾಬ್ದಾರಿ ಆ ಸಂಸ್ಥೆಗಳದ್ದಾಗಿರುತ್ತದೆ. ಸರ್ಕಾರ ಎಲ್ಲಾ ಸೌಲಭ್ಯಗಳನ್ನು ನೀಡಲು ಸಾಧ್ಯವಿಲ್ಲ.